ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	2410
ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು	ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	22-03-2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಎಷ್ಟು ಮಕ್ಕಳ ಸಹಾಯವಾಣಿ ಕೇಂದ್ರಗಳಿವೆ; ಅವು ಯಾವ ವರ್ಷದಲ್ಲಿ ಪ್ರಾರಂಭವಾಗಿವೆ; ಅವುಗಳು ಯಾವ ಹಂತದಲ್ಲಿವೆ;	ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಯಲ್ಲಿ 05 ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಮಕ್ಕಳ ಸಹಾಯವಾಣಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಂಸ್ಥೆಯು ಪ್ರಾರಂಭಗೊಂಡ ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.
ಆ)	ಕಳೆದ ಐದು ವರ್ಷಗಳಲ್ಲಿ ಸಹಾಯವಾಣಿ ಕೇಂದ್ರಗಳಿಂದ ಎಷ್ಟು ಮಕ್ಕಳಿಗೆ ಸಹಾಯ/ಪುನರ್ವಸತಿ ನೀಡಲಾಗಿದೆ: (ಸಂಸ್ಥೆವಾರು, ಮಕ್ಕಳವಾರು ವಿವರ ನೀಡುವುದು)	ಕಳೆದ 05 ವರ್ಷಗಳಲ್ಲಿ ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿ ಕೇಂದ್ರದಿಂದ ಸಹಾಯ/ಪುನರ್ವಸತಿ ಒದಗಿಸಿರುವ ಮಕ್ಕಳ ಸಂಖ್ಯೆಗಳ ವಿವರ ಈ ಕೆಳಕಂಡತಿರುತ್ತದೆ. **ಜಿಲ್ಲೆ** — **ಸಹಾಯ/ಪುನರ್ವಸತಿ ಒದಗಿಸಿರುವ ಮಕ್ಕಳ ಸಂಖ್ಯೆ** ಬೀದರ್ — 4732 ಕಲ್ಬುರ್ಗಿ — 4434 ಮಕ್ಕಳ ಸಹಾಯವಾಣಿಗೆ ಸ್ವೀಕೃತವಾಗುವ ಕರೆಗಳ ಅಗತ್ಯತೆಗೆ ಅನುಗುಣವಾಗಿ ಮಕ್ಕಳ ಸಹಾಯವಾಣಿ ಕೇಂದ್ರದ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆಪ್ತ ಸಮಾಲೋಚನೆ, ಮಾರ್ಗದರ್ಶನ, ಸಹಾಯ ಹಾಗೂ ಪುರ್ನವಸತಿ ಒದಗಿಸಿರುವ ಕುರಿತಂತೆ ಸಂಸ್ಥೆವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. ಮಕ್ಕಳ ಪ್ರಕರಣಗಳ ಗೌಪ್ಯತೆಯನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಕಲಂ 74ರನ್ವಯ ನಿರ್ವಹಿಸಬೇಕಾಗಿರುವುದರಿಂದ, ಸಂಸ್ಥೆವಾರು ಮಕ್ಕಳಿಗೆ ಒದಗಿಸಿರುವ ಮಕ್ಕಳ ಸಂಖ್ಯೆಯನ್ನು ಒದಗಿಸಲಾಗಿದೆ.
ಇ)	ಕಳೆದ 5 ವರ್ಷಗಳಿಂದ ಸಹಾಯವಾಣಿ ಕೇಂದ್ರಗಳನ್ನು ನಡೆಸಲು ಸರ್ಕಾರ ಪ್ರತಿ ವರ್ಷ ಪ್ರತಿ ಕೇಂದ್ರಕ್ಕೆ ಕೇಂದ್ರ/ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಅನುದಾನ ಎಷ್ಟು;	ಮಕ್ಕಳ ಸಹಾಯವಾಣಿ ಕೇಂದ್ರದ ನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ಮಾತ್ರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಕಳೆದ 05 ವರ್ಷಗಳಲ್ಲಿ ಬೀದರ್ ಮತ್ತು ಕಲ್ಬುರ್ಗಿ ಜಿಲ್ಲೆಯ ಮಕ್ಕಳ ಸಹಾಯವಾಣಿ ಕೇಂದ್ರಗಳ ನಿರ್ವಹಣೆಗಾಗಿ ಒಟ್ಟು ರೂ.363.06 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಕೇಂದ್ರವಾರು ಮಾಹಿತಿಯನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ.

ಈ)	ಸಹಾಯವಾಣಿ ಕೇಂದ್ರಗಳು ಕಾರ್ಯ ನಿರ್ವಹಿಸಬೇಕಾದಲ್ಲಿ ಕನಿಷ್ಠ ಪ್ರತಿ ತಿಂಗಳು/ವರ್ಷಗಳ ನಿಯಮದಂತೆ ಮಾಡುವ ಕೆಲಸಗಳಾವುವು; ಇವುಗಳಿಗೆ ನೋಡಲ್ ಅಧಿಕಾರಿ ಯಾರು?	ಮಕ್ಕಳ ಉಚಿತ ಸಹಾಯವಾಣಿ ಕೇಂದ್ರವು ದಿನದ 24x7 ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳ ನೆರವಿಗಾಗಿ ಕಾರ್ಯನಿರ್ವಹಿಸುತ್ತಿದೆ. **ಮಕ್ಕಳ ಸಹಾಯವಾಣಿ ಕೇಂದ್ರಗಳು ಪ್ರತಿ ಮಾಹೆ ನಿರ್ವಹಿಸಬೇಕಾದ ಕಾರ್ಯಗಳು:** 1. ಪ್ರತಿನಿತ್ಯ ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆಗೆ ಸ್ವೀಕೃತವಾಗುವ ಕರೆಗಳ ವಿಷಯವನ್ನು ಆಧರಿಸಿ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿಯನ್ನು ನೀಡುವುದು. 2. ಪ್ರತಿನಿತ್ಯ ಸ್ವೀಕೃತವಾಗುವ ಕರೆಗಳ ಕುರಿತು ಸಂಬಂಧಿಸಿದ ಇಲಾಖೆಗಳಿಂದ ಅಗತ್ಯಕ್ರಮ ವಹಿಸಿರುವ ಬಗ್ಗೆ ಅನುಸರಣೆ. 3. ಪ್ರತಿ ಮಾಹೆ ಮಕ್ಕಳ ಸಹಾಯವಾಣಿ ಕರೆಗಳನ್ನು ಉಪಯೋಗಿಸುವ ಮಕ್ಕಳೊಂದಿಗೆ ಸಭೆಯನ್ನು ಹಮ್ಮಿಕೊಳ್ಳುವುದು. 4. ವಿವಿಧ ಇಲಾಖೆಯಿಂದ ಹಮ್ಮಿಕೊಳ್ಳಲಾಗುವ ಸಭೆಗಳಲ್ಲಿ ಭಾಗವಹಿಸುವುದು ಹಾಗೂ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡುವ ಮೂಲಕ ಪಡೆಯಬಹುದಾದ ಸೌಲಭ್ಯಗಳ ಕುರಿತು ಇಲಾಖಾ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳುವುದು. 5. ಜಿಲ್ಲೆಗಳ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳನ್ನು ಸಂಘಟಿಸಿ, ಈ ಗುಂಪುಗಳ ಮೂಲಕ ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳುವುದು. 6. ಮಕ್ಕಳ ಕಲ್ಯಾಣ ಸಮಿತಿಯಿಂದ ಮಕ್ಕಳ ಪ್ರಕರಣಗಳ ಕುರಿತು ಮಕ್ಕಳ ಸಹಾಯವಾಣಿ ಘಟಕದಿಂದ ಅನುಸರಣೆಯೆಂದು ಹೊರಡಿಸಲಾಗುವ ಆದೇಶದನ್ವಯ ಅನುಸರಣೆಯನ್ನು ನಿರ್ವಹಿಸಲಾಗುತ್ತಿದೆ. **ಮಕ್ಕಳ ಸಹಾಯವಾಣಿ ಕೇಂದ್ರಗಳು ವಾರ್ಷಿಕವಾಗಿ ನಿರ್ವಹಿಸಬೇಕಾದ ಕಾರ್ಯಗಳು:** 1. ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸಮಾಜ ಕಲ್ಯಾಣ ಇಲಾಖೆಗಳಿಂದ ಭಿಕ್ಷಾಟನೆಗೆ ಒಳಪಟ್ಟ, ಬಾಲಕಾರ್ಮಿಕತೆಗೆ ಒಳಗಾದ, ಬಾಲ್ಯ ವಿವಾಹ ಹಾಗೂ ಇನ್ನಿತರೆ ಸನ್ನಿವೇಶಗಳಲ್ಲಿ ಕೈಗೊಳ್ಳಲಾಗುವ ರೆಸ್ಕ್ಯೂ ಆಪರೇಷನ್‌ಗಳಲ್ಲಿ ಭಾಗವಹಿಸಿ ಅಗತ್ಯ ಸೇವೆಯನ್ನು ಒದಗಿಸುವುದು. 2. ಜಿಲ್ಲೆಗಳಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ದೊರೆಯುವ ಸೌಲಭ್ಯಗಳ ಕುರಿತು ಡೈರಕ್ಟರಿಯನ್ನು ಸಿದ್ಧಪಡಿಸುವುದು ಹಾಗೂ ನಿಯಮಿತವಾಗಿ ನವೀಕರಿಸುವುದು. 3. ಇಲಾಖಾ ಅಧಿಕಾರಿಗಳು ಹಾಗೂ ಮಕ್ಕಳ ಸಹಾಯವಾಣಿ ಸಿಬ್ಬಂದಿ ಮತ್ತು ಸ್ವಯಂ ಸೇವಕರಿಗೆ ಮಕ್ಕಳ ಸಹಾಯವಾಣಿಯಿಂದ ದೊರೆಯುವ ಸೌಲಭ್ಯಗಳು ಮತ್ತು ಮಕ್ಕಳ ಹಕ್ಕುಗಳು ಹಾಗೂ ಸರ್ಕಾರದ ವಿವಿಧ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ತರಬೇತಿ ಹಾಗೂ ಪುನಃಶ್ಚೇತನ ತರಬೇತಿಗಳನ್ನು ಹಮ್ಮಿಕೊಳ್ಳುವುದು. 4. ಮಕ್ಕಳ ಸಹಾಯವಾಣಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ನಿರ್ವಹಣೆ ಆಡಿಟ್ ವರದಿ ತಯಾರಿಕೆ.

		ಮಕ್ಕಳ ಸಹಾಯವಾಣಿಗೆ ಗುರುತಿಸಿರುವ ನೋಡಲ್ ಅಧಿಕಾರಿಗಳ ವಿವರ: 1. ಬೀದರ್‌ಜಿಲ್ಲೆ: ಡಾನ್ ಬಾಸ್ಕೋ ಯೂತ್ ಎಂಪವರ್‌ಮೆಂಟ್ ಸರ್ವಿಸ್ ಸಂಸ್ಥೆಯ ಶ್ರೀ ನೆಲ್ಸನ್ ಇವರನ್ನು ಹಾಗೂ 2. ಕಲ್ಬುರ್ಗಿ ಜಿಲ್ಲೆ: ಎಸ್‌ಎಸ್ ಲಾ ಕಾಲೇಜ್‌ನ ಶ್ರೀ.ಟಿ ಬಸವರಾಜ್ ಎಂಬುವರನ್ನು ನೋಡಲ್ ಅಧಿಕಾರಿಯನ್ನಾಗಿ ಗುರುತಿಸಲಾಗಿರುತ್ತದೆ.

ಸಂಖ್ಯೆ:ಮಮಇ 41 ಮಭಾಬ 2022

Halappa

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತುಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅನುಬಂಧ-1				
ಬೀದರ್ ಮತ್ತು ಕಲಬುರಗಿ ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿ 1098 ಉಪ ಘಟಕಗಳನ್ನು ಪ್ರಾರಂಭಗೊಳಿಸಿದ ವಿವರ.				
ಕ್ರಮ.ಸಂಖ್ಯೆ	ಜಿಲ್ಲೆ	ಉಪ ಘಟಕಗಳ ವಿವರ	ಪ್ರಾರಂಭಿಸಿದ ದಿನಾಂಕ	ಪ್ರಸ್ತುತ ಹಂತ
01	ಬೀದರ್	ಡಾನ್ ಬಾಸ್ಕೋ ಯೂತ್ಎಂಪವರ್‌ಮೆಂಟ್ ಸರ್ವೀಸ್	28.10.2010	ಎಲ್ಲಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
02	ಬೀದರ್	ಸಹಯೋಗ್	28.10.2010	
03	ಬೀದರ್	ಡಾ. ಬಿ.ಆರ್‌ಅಂಬೇಡ್ಕರ್‌ಕಲ್ಚರಲ್‌ಅನದ ವೆಲ್‌ಫೇರ್ ಸೊಸೈಟಿ	28.10.2010.	
04	ಬೀದರ್	ಆರ್‌ಗನೈಜೆಷನ್ ಫಾರ್ ಬೀದರ್‌ಇಂಟಿಗ್ರಲ್‌ಇನ್‌ಫಾರ್‌ವೇಷನ್(ಆರ್‌ಬಿಟ್)	28.10.2010.	
05	ಬೀದರ್	ಕಾರ್ಮೆಲ್ ಸೇವಾ ಟ್ರಸ್ಟ್	28.10.2010.	
06	ಕಲಬುರಗಿ	ಎಸ್‌ಎಸ್ ಲಾ ಕಾಲೇಜ್(ಸೇಟ್ ಶಂಕರ್‌ಲಾಲ್ ಲಾಹೋತಿಕಾಲೇಜ್)	01.03.2009.	
07	ಕಲಬುರಗಿ	ಡಾನ್ ಬಾಸ್ಕೋ ಪ್ಯಾರ್	01.03.2009.	
08	ಕಲಬುರಗಿ	ಮಾರ್ಗದರ್ಶಿ ಸೊಸೈಟಿ	01.03.2009.	
09	ಕಲಬುರಗಿ(ಕಲಬುರಗಿರೈಲ್ವೆ ಸ್ಟೇಷನ್)	ಮಾರ್ಗದರ್ಶಿ ಸೊಸೈಟಿ	01.05.2018.	
10.	ಕಲಬುರಗಿ(ವಾಡಿಜಂಕ್ಷನ್‌ರೈಲ್ವೆ ಸ್ಟೇಷನ್)	ಹೈದ್ರಾಬಾದ್‌ಕರ್ನಾಟಕಎಜುಕೇಷನ್ ಸೊಸೈಟಿ	01.10.2019.	

ಅನುಬಂಧ–2							
ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿ 1098 ಉಪ ಘಟಕಗಳಿಂದ ಮಕ್ಕಳಿಗೆ ಸಹಾಯ/ಪುರ್ನವಸತಿ ಒದಗಿಸಿರುವ ಮಕ್ಕಳ ಸಂಖ್ಯೆ							
ಕ್ರ.ಸಂ	ಜಿಲ್ಲೆ	ಉಪ ಘಟಕಗಳ ವಿವರ	2017–18	2018–19	2019–20	2020–21	2021–22
01	ಬೀದರ್	ಡಾನ್ ಬಾಸ್ಕೋ ಯೂತ್‌ಎಂಪವರ್‌ಮೆಂಟ್ ಸರ್ವೀಸ್	576	873	985	782	750
02	ಬೀದರ್	ಸಹಯೋಗ್	24	31	41	86	8
03	ಬೀದರ್	ಡಾ. ಬಿ.ಆರ್‌ಅಂಬೇಡ್ಕರ್‌ಕಲ್ಚರಲ್‌ಅನದ ವೆಲ್‌ಫೇರ್ ಸೊಸೈಟಿ	32	4	9	43	1
04	ಬೀದರ್	ಆರ್‌ಗನೈಜೆಷನ್ ಫಾರ್ ಬೀದರ್‌ಇಂಟಿಗ್ರಲ್‌ಇನ್‌ಫಾರ್‌ವೇಷನ್(ಆರ್‌ಬಿಟ್)	54	18	17	2	23
05	ಬೀದರ್	ಕಾರ್ಮೆಲ್ ಸೇವಾ ಟ್ರಸ್ಟ್	0	0	144	134	95
06	ಕಲಬುರಗಿ	ಎಸ್ ಎಸ್ ಲಾ ಕಾಲೇಜ್(ಸೇಟ್ ಶಂಕರ್‌ಲಾಲ್ ಲಾಹೋತಿಕಾಲೇಜ್)	ನೋಡಲ್ ಸಂಸ್ಥೆಯಾಗಿರುವುದರಿಂದ ನೇರವಾಗಿ ಮಕ್ಕಳ ಕರೆಗಳನ್ನು ಸ್ವೀಕರಿಸುವುದಿಲ್ಲ				
	ಒಟ್ಟು		686	926	1196	1047	877
07	ಕಲಬುರಗಿ	ಡಾನ್ ಬಾಸ್ಕೋ ಪ್ಯಾರ್	724	776	938	622	595
08	ಕಲಬುರಗಿ	ಮಾರ್ಗದರ್ಶಿ ಸೊಸೈಟಿ	72	55	17	14	29
09	ಕಲಬುರಗಿ(ಕಲಬುರಗಿರೈಲ್ವೆ ಸ್ಟೇಷನ್)	ಮಾರ್ಗದರ್ಶಿ ಸೊಸೈಟಿ	0	211	173	20	45
10.	ಕಲಬುರಗಿ(ವಾಡಿ ಜಂಕ್ಷನ್‌ರೈಲ್ವೆ ಸ್ಟೇಷನ್)	ಹೈದ್ರಾಬಾದ್‌ಕರ್ನಾಟಕ ಎಜುಕೇಷನ್ ಸೊಸೈಟಿ	0	1	37	16	89
	ಒಟ್ಟು		796	1043	1165	672	758

ಅನುಬಂಧ-3

ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಮಕ್ಕಳ ಸಹಾಯವಾಣಿ 1098 ಉಪ ಘಟಕಗಳಿಗೆ ಬಿಡುಗಡೆ ಮಾಡಿರುವ ವಾರ್ಷಿಕಅನುದಾನದ ವಿವರ

ಕ್ರಸಂ	ಜಿಲ್ಲೆ	ಉಪ ಘಟಕಗಳ ವಿವರ	ಅನುದಾನ ಬಿಡುಗಡೆಯಾದ ವಿವರ(ರೂ ಲಕ್ಷಗಳಲ್ಲಿ)				
			2016 –17	**2017 –18**	**2018 –19**	**2019 –20**	**2020 –21**
01	ಬೀದರ್	ಡಾನ್ ಬಾಸ್ಕೋ ಯೂತ್ಎಂಪವರ್ಮೆಂಟ್ ಸರ್ವೀಸ್	10.68	12.44	12.40	13.31	14.94
02	ಬೀದರ್	ಸಹಯೋಗ್	05.45	05.36	05.41	05.54	05.71
03	ಬೀದರ್	ಡಾ. ಬಿ.ಆರ್ಅಂಬೇಡ್ಕರ್ಕಲ್ಚರಲ್ಅನದ ವೆಲ್ಫೇರ್ ಸೊಸೈಟಿ	05.49	05.34	05.38	05.47	05.60
04	ಬೀದರ್	ಆರ್ಗನೈಜೆಷನ್ ಫಾರ್ ಬೀದರ್ಇಂಟಿಗ್ರಲ್ಇನ್ಫಾರ್ವೆಁಷನ್(ಆರ್ಬಿಟ್)	05.22	05.45	5.23	05.57	05.74
05	ಬೀದರ್	ಕಾರ್ಮೆಲ್ ಸೇವಾ ಟ್ರಸ್ಟ್	0	0	2.60	16.24	13.65
06	ಕಲಬುರಗಿ	ಎಸ್ಎಸ್ ಲಾ ಕಾಲೇಜ್(ಸೇಟ್ ಶಂಕರ್ಲಾಲ್ ಲಾಹೋತಿಕಾಲೇಜ್)	03.67	03.51	3.36	04.03	04.60
07	ಕಲಬುರಗಿ	ಡಾನ್ ಬಾಸ್ಕೋ ಪ್ಯಾರ್	13.77	14.30	14.36	14.30	14.34
08	ಕಲಬುರಗಿ	ಮಾರ್ಗದರ್ಶಿ ಸೊಸೈಟಿ	05.99	05.85	06.03	05.95	06.04
09	ಕಲಬುರಗಿ(ಕಲಬುರಗಿರೈಲ್ವೆ ಸ್ಟೇಷನ್)	ಮಾರ್ಗದರ್ಶಿ ಸೊಸೈಟಿ	0	0	16.06	13.03	12.16
10.	ಕಲಬುರಗಿ(ವಾಡಿ ಜಂಕ್ಷನ್ರೈಲ್ವೆ ಸ್ಟೇಷನ್)	ಹೈದ್ರಾಬಾದ್ಕರ್ನಾಟಕಎಜುಕೇಷನ್ ಸೊಸೈಟಿ	0	0	0	9.08	14.95
			50.27	52.25	70.83	92.52	97.73